


## ವಿನೂತನ ಗೆರಟೆ ಗೋಪುರ

ಉಡುಪಿ ಪರ್ಯಾಯಕ್ಕೆ ನಾನಾ ರೂಪಗಳಲ್ಲಿ ಸಜ್ಜುಗೊಳ್ಳುತ್ತಿರುವಂತೆ ಕಲಾವಿದರ ಸೃಜನಶೀಲತೆ ಅಲ್ಲಲ್ಲಿ ಮಿಂಚುತ್ತದೆ. ನಾವೀನ್ಯ ಅಲಂಕಾರಗಳಿಂದ ಶ್ರೀ ಕೃಷ್ಣನ ಅಷ್ಟಮಠದ ಸುತ್ತ ಮತ್ತು ಹಲವಾರು ಕಿ.ಮೀ ಬೀದಿಯು ಕಂಗೊಳಿಸುತ್ತಿದೆ. ಈ ವರ್ಷದ ಅದಮಾರು ಮಠದ ಪರ್ಯಾಯ ಮಹೋತ್ಸವ, ಪರಿಸರ ಪ್ರಾಮುಖ್ಯತೆ ಪಡೆದು ಫ್ಲೆಕ್ಸ್ ಬದಲು ಬಟ್ಟೆಗಳ ಬ್ಯಾನರ್‌ಗಳಿಗೆ ಮರುಜೀವ ಸಿಕ್ಕಿತ್ತು. ನಿರ್ಮಾಣಗೊಂಡ 41 ಗೋಪುರಗಳಲ್ಲಿ ತೆಂಗಿನ ಚಿಪ್ಪುಗಳನ್ನು ಜೋಡಿಸಿ ಹೆಣೆದ ಸ್ವಾಗತ ಗೋಪುರವೂ ಎಲ್ಲರ ಗಮನ ಸೆಳೆಯುವಂತೆ ವಿಶಿಷ್ಟವಾಗಿದೆ. ಕುಂಭಾಸಿಯ ಕೊರಗ ಸಮುದಾಯದ ಯುವ ಸಂಘಟನೆಯೊಂದು ಕಲಾವಿದ ಪುರುಷೋತ್ತಮ ಅಡ್ವೆಯವರ ಮಾರ್ಗದರ್ಶನದಲ್ಲಿ ಚಿಪ್ಪಿನ ಗೋಪುರವನ್ನು ರಚಿಸಿದ್ದಾರೆ. ಕರಾವಳಿಯಲ್ಲಿ ದೊರೆಯುವ ಅತೀ ಹೆಚ್ಚಿನ ತೆಂಗಿನ ಬೆಳೆಗೆ ಪೂರಕವಾಗಿ ಸಾಂಪ್ರದಾಯಿಕ ಶೈಲಿಯಲ್ಲಿ ನಾಲ್ಕು ದಿನಗಳ ಕಾಲ ಪರಿಶ್ರಮ ಪಟ್ಟು ಗೆರಟೆ ಗೋಪುರ ನಿರ್ಮಿಸಲಾಗಿದೆ. 3000 ತೆಂಗಿನ ಚಿಪ್ಪುಗಳನ್ನು ಬಳಸಿ 5 ಮಂದಿ ಯುವಕರು ಮತ್ತು 10 ಮಕ್ಕಳು ಸೇರಿದಂತೆ ಒಟ್ಟು 15 ಮಂದಿ ಕೆಲಸಕ್ಕೆ ಹಗಲಿರುಳು ದುಡಿದಿದ್ದಾರೆ. ಇದಕ್ಕೆ ಬೇಕಾದ ಕಚ್ಚಾ ವಸ್ತುಗಳನ್ನು ತೆಂಗಿನ ಎಣ್ಣೆ ಮಿಲ್‌ನಿಂದ ಪಡೆಯಲಾಗಿದೆ. ಚಿಪ್ಪಿಗೆ ಡ್ರಿಲ್ ಮಾಡಿದ ತೂತುಗಳ ಮೂಲಕ ಪೋಣಿಸಿ ಹೆಣೆಯಲಾಗಿದೆ.

–ಜೀವನ್ ಶೆಟ್ಟಿ, ಉಡುಪಿ

## ಆನೆದಂತದ ಫ್ರೇಮ್

ಅದಮಾರು ಮಠ ಒಳ ಹೊಕ್ಕರೆ ಹೊಸಿಲ ಬಾಗಿಲೆದುರು ಕಾಣ ಸಿಗುವ ಕಟ್ಟು ಹಾಕಿಸಿದ ಚಿತ್ರಪಟ ಎಲ್ಲರನ್ನೂ ಆಕರ್ಷಿಸುತ್ತದೆ. ಅದು ಆನೆ ದಂತದ ಕಟ್ಟು. ಈ ಚಿತ್ರಪಟ ಅದಮಾರು ಮಠದ ಸ್ವಾಮಿಗಳ ಪರಂಪರೆಯ 5 ತಲೆಮಾರು ಹಿಂದಿನ ಪರ್ಯಾಯ ಪೀಠಾಧೀಶರಾದ ಶ್ರೀ ವಿಭುದಪ್ರಿಯ ತೀರ್ಥ ಸ್ವಾಮೀಜಿಯವರದ್ದು. ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಈ ಸ್ವಾಮೀಜಿಯವರಿದ್ದು, ಮಹರಾಜರು ಈ ಮಠಕ್ಕೆ ಹಲವಾರು ಕೊಡುಗೆ ನೀಡಿದ್ದರು. ಮಹಾರಾಣಿ ಅವರ ಕನಸಿನ ನಿಮಿತ್ತ ಶ್ರೀ ಕೃಷ್ಣ ದೇವರಿಗೆ ಚಿನ್ನದ ಕಾಲ್ಗೆಜ್ಜೆ ಅರ್ಪಿಸಿದ್ದರು. ಈ ಶ್ರೀ ವಿಭುದಪ್ರಿಯ ತೀರ್ಥ ಸ್ವಾಮಿಗಳ ಚಿತ್ರಪಟ ಕಾಷ್ಠಶಿಲ್ಪದ ಕುಸುರಿಯ ಚೌಕಟ್ಟಿನೊಂದಿಗೆ ಇದು ಆಕರ್ಷಿಸುತ್ತಿದೆ.

–ಉಮೇಶ್ ಆಚಾರ್ಯ, ಉಡುಪಿ





## ಚಿಟ್ಟಿಗೋಲಿ

ಗೋಲಿಯಾಟ ಆಡಲು ಹಳ್ಳಿ ಪ್ರದೇಶದಲ್ಲಿ ಹಿಂದಿನ ಕಾಲದಲ್ಲಿ ಮಕ್ಕಳು ಈ ಚಿತ್ರದಲ್ಲಿ ಕಾಣುತ್ತಿರುವ ಚಿಟ್ಟಿಗೋಲಿಗಳನ್ನು ಬಳಸುತ್ತಿದ್ದರು. ಕಾಡಿನ ಪ್ರದೇಶದಲ್ಲಿ ವಿಶಾಲವಾಗಿ ಹಬ್ಬಿ ಬೆಳೆಯುವ ಬಳ್ಳಿಗಳು ಚಿಟ್ಟಿಗೋಲಿಗಳನ್ನು ಬಿಡುತ್ತವೆ. ಇವುಗಳನ್ನು ಕಾಡಿನಿಂದ ಕಿತ್ತುತಂದು ಮಕ್ಕಳು ಆಟವಾಡುತ್ತಿದ್ದರು. ಆದರೆ ಈಗ ಹಳ್ಳಿ ಆಟವೇ ಮರೆಯಾಗಿವೆ. ಕಾಡಿನ ಗೋಲಿಗಳು ಸಿಗುವುದೂ ಅಪರೂಪವಾಗಿದೆ. ಈ ಚಿಟ್ಟಿಗೋಲಿಗಳು ಮೈದಾನಕ್ಕಷ್ಟೇ ಸೀಮಿತ. ಮನೆಗೆ ತಂದರೆ ಕಲಹಕ್ಕೆ ನಾಂದಿ ಎಂಬ ಮಾತು ಬಳಕೆಯಲ್ಲಿತ್ತು. ಚಿಟ್ಟಿಗೋಲಿಯ ಬಳ್ಳಿ ಔಷಧೀಯ ಗುಣಗಳನ್ನು ಹೊಂದಿದೆ. ಇದರ ಬೇರು ಜ್ವರಕ್ಕೆ ರಾಮಬಾಣ ಎಂದು ಹಿರಿಯರು ಹೇಳುತ್ತಿದ್ದರು. ಜೊತೆಗೆ ಹಳ್ಳಿಗಳಲ್ಲಿ ಔಷಧಿ ರೂಪದಲ್ಲಿ ಬಳಸುತ್ತಿದ್ದರು. ಈಗ ಹಳ್ಳಿ ಔಷಧಿಯನ್ನು ಬಳಸುವವರು ಕಡಿಮೆಯಾಗಿದ್ದಾರೆ.

–ಸಿ.ಎಸ್. ಸುರೇಶ್, ಕೊಡಗು